ಒ.ಎಸ್.ನಂಬ್ರಃ **109/2019** ಪಿ.ಡಬ್ಲ್ಯೂ/ಡಿ.ಡಬ್ಲ್ಯೂ: **1**

ದಿನಾಂಕಃ 19-10-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಯು ಎಸ್ ಎಸ್ ರವರಿಂದ

ನನಗೆ ಇಬ್ಬರು ಮಕ್ಕಳು, ಅವರು 1 ಮತ್ತು 2 ನೇ ಪ್ರತಿವಾದಿಗಳು. ಈ ದಾವೆಯನ್ನು ಹಾಕುವ ಪೂರ್ವದಲ್ಲಿ ನನ್ನ ಅಜ್ಜ ರುಕ್ಕು ಪೂಜಾರ್ತಿರವರಿಗೆ ಕುಷ್ಟ ಮುತ್ತ ಬಚ್ಚಿ ಎಂಬ ಮಕ್ಕಳಿರುವ ಬಗ್ಗೆ ಗೊತ್ತಿತ್ತು. ಈಗ ಕುಷ್ಟ ಮತ್ತು ಬಚ್ಚಿ ಜೀವಂತವಾಗಿರುವುದಿಲ್ಲ. ಅವರ ವಾರಸುದಾರರು ಇದ್ದಾರೆ. ನ್ಯಾಯಾಲಯದಲ್ಲಿ ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ಮಂಜು ಪೂಜಾರಿರವರ ಹೆಸರಿನಲ್ಲಿದೆ ಎಂದರೆ ಸರಿ. ಖಾತಾ ಬದಲಾವಣೆ ಆದ ಬಗ್ಗೆ ಮ್ಯುಟೇಶನ್ ರಿಜಿಸ್ಟರನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತುಗಳು ಅಳಿಯ ಸಂತಾನ ಸ್ವತ್ತುಗಳು ಎಂದು ತೋರಿಸಲು ದಾಖಲೆ ಇರುವುದಿಲ್ಲ.

ದಾವಾ ಸ್ವತ್ತುಗಳ ಮೂಲ ಮಾಲೀಕರು ನಾರಾಯಣ ಸೋಮಯಾಜಿ. ದಾವಾ ಸ್ವತ್ತುಗಳನ್ನು ಯಾರು ಗೇಣಿ ಮಾಡಿಕೊಂಡಿದ್ದರೋ ಅವರೇ ತಮ್ಮ ಹೆಸರಿನಲ್ಲಿ ಗೇಣಿ ರಸೀದಿಯನ್ನು ಪಡೆದಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳಿಗೆ ರುಕ್ಕು ಪೂಜಾರ್ತಿ ಗೇಣಿದಾರರು ಎಂಬ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ಹಾಜರುಪಡಿಸಿರುವ ಕಂದಾಯ ರಸೀದಿಗಳು ಮಂಜು ಪೂಜಾರಿಯವರ ಹೆಸರಿನಲ್ಲಿದೆ ಎಂದರೆ ಸರಿ. ಮಂಜು ಪೂಜಾರಿಯವರ ವಾರಸುದಾರರು

ಅಂಪಾರುವಿನಲ್ಲಿದ್ದಾರೆ. ಮಂಜು ಪೂಜಾರಿಯವರು ಸತ್ತಾಗ ಕೊನೆಯ ಬಾರಿ ಅವರ ಮನೆಗೆ ಹೋಗಿರುತ್ತೇನೆ. ಮಂಜು ಪೂಜಾರಿಯವರು ತೀರಿಕೊಂಡು ಸುಮಾರು 15 ವರ್ಷವಾಗಿರಬಹುದು.

ದಾವಾ ಸ್ವತ್ತಿನಲ್ಲಿರುವ ಮನೆಯನ್ನು ಮಂಜು ಪೂಜಾರಿಯವರೇ ಕಟ್ಟಿಸಿದ್ದು, ಅವರ ಅಕ್ಕ ಭಾಗೀರಥಿರವರಿಗೆ ವಾಸಿಸಲು ಅವಕಾಶ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿಗೆ ವಾಸಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ದುರುಪಯೋಗಪಡಿಸಿಕೊಂಡು ಪಾಲು ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮಂಜು ಪೂಜಾರಿಯವರ ಸ್ವಂತ ಗೇಣಿ ಸ್ಥಳಗಳಾಗಿದ್ದು, ಕುಟುಂಬದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಮಂಜು ಪೂಜಾರಿಯವರು ತೀರಿಕೊಂಡಿರುವುದರಿಂದ ದಾವಾ ಸ್ವತ್ತುಗಳಲ್ಲಿ 5 ರಿಂದ 10 ನೇ ಪ್ರತಿವಾದಿಗಳಿಗೆ ಮಾತ್ರ ಹಕ್ಕು ಇದ್ದು, ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮಂಜು ಪೂಜಾರಿರವರ ಹೆಸರಿಗೆ ಆದ ಭೂನ್ಯಾಯ ಮಂಡಳಿ ಆದೇಶದ ಮೂಲ ದಾಖಲೆಗಳು ನನ್ನ ತಾಯಿ ಬಳಿ ಇದೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡ ನಂತರ ಆ ಎಲ್ಲಾ ಮೂಲ ದಾಖಲೆಗಳನ್ನು ನಾನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಎಲ್ಲಾ ದಾಖಲೆಗಳು ನನ್ನ ಬಳಿ ಇದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯಾಂತ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮಂಜು ಪೂಜಾರಿರವರ ಸ್ವಂತ ಗೇಣಿ ಆಸ್ತಿಗಳಾಗಿದ್ದು, ನಾವು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮಂಜು ಪೂಜಾರಿರವರ ಸ್ವಂತ ಗೇಣಿ ಆಸ್ತಿ ಆಗಿರುವುದರಿಂದ ಭೂ ಮಾಲೀಕರಿಗೆ ಗೇಣಿ ನೀಡಿ ಅವರ ಹೆಸರಿನಲ್ಲಿ ರೇದಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಮೌಖಿಕವಾಗಿ ಪಾಲು ಆಗಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮಂಜು ಪೂಜಾರಿರವರ ವಾರಸುದಾರರಿಗೆ ಸಾಗುವಳಿ ಮಾಡಲು ಆಗುವುದಿಲ್ಲ ಎಂದು ಸುಮಾರು ವರ್ಷ ನಾನು ಸಾಗುವಳಿ ಮಾಡಿರುತ್ತೇನೆ, ಆ ಕುರಿತು ನಾನು ಗೇಣಿಯನ್ನು ನೀಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**